ಕೇಳಿದಳು ಆಶಾ. ಎಲ್ಲರೂ ನಕ್ಕರು. ಪ್ರಭಾಕರನಿಗೆ ಆಶಾ ನಕ್ಕದ್ದು ನೋಡಿ ಖುಷಿಯಾಯ್ತು. ಧೈರ್ಯ ಬಂತು.

ಸಂಜಯ್ ಶಾಸ್ತ್ರಿಗಳ ಹತ್ತಿರ ಹೋಗಿ ಆ ದಿನದ ದೇವಸ್ಥಾನದ ಕಾರ್ಯಕ್ರಮದ ಬಗ್ಗೆ ಹೇಳಿದ. ಆಶಾಳೂ ತಾನೂ ದೇವಸ್ಥಾನದ ವಸಂತ ಪೂಜೆಗೆ ಹೋಗುವುದಾಗಿ ಹೇಳಿದಳು. ಶಾಸ್ತ್ರಿಗಳು ಹೋಗುವಾಗ ಹಣ್ಣು ಹಂಪಲು ತೆಗೆದುಕೊಂಡು ಹೋಗಲು ಹೇಳಿದರು.

ಸಂಜಯ್, ಆನಂದಣ್ಣ, ಪ್ರಭಾಕರ ಮತ್ತು ಆಶಾ ದೇವಸ್ಥಾನಕ್ಕೆ ಒಟ್ಟಾಗಿ ಹೊರಟರು. ಸಂಜಯ್ ಹೆಗಲಲ್ಲಿ ಬ್ಯಾಗ್, ಲ್ಯಾಪ್‌ಟಾಪ್ ಇತ್ಯಾದಿ ಇತ್ತು. ಆಶಾಳ ಕೈಯಲ್ಲಿ ಮಾವಿನಹಣ್ಣು, ಅನಾನಸ್ ಮತ್ತು ಇತರ ಹಣ್ಣುಗಳ ಬ್ಯಾಗ್ ಇತ್ತು. ಆಶಾಳನ್ನು ನೋಡಿದವರೇ ಆನಂದಣ್ಣ 'ಚೀಲ ಕೊಡಿಯಮ್ಮ' ಎನ್ನುತ್ತಾ ಆಶಾಳ ಕೈಯಿಂದ ಚೀಲ ತೆಗೆದುಕೊಂಡು ಹೆಗಲಿಗೆ ಏರಿಸಿದರು. ಪ್ರಭಾಕರ ಸಂಜಯ್ ಕೈಯಿಂದ ಅವನ ಬ್ಯಾಗ್ ತೆಗೆದುಕೊಂಡ.

ಎಲ್ಲರೂ ದೇವಸ್ಥಾನ ತಲುಪಿದರು. ದೇವಸ್ಥಾನದಲ್ಲಿ ಆಗಲೇ ನೂರಾರು ಜನ ಸೇರಿದ್ದರು. ವಸಂತ ಪೂಜೆ, ವಸಂತ ಋತುವಿನ ವಿಶೇಷ ಪೂಜೆ. ಆ ದಿನ ದೇವರ ಮೂರ್ತಿಯನ್ನು ಸಂಪೂರ್ಣವಾಗಿ ಹಣ್ಣು ಹಂಪಲುಗಳಿಂದ ಅಲಂಕರಿಸುತ್ತಾರೆ. ಪೂಜೆ ಆದ ನಂತರ ಎಲ್ಲರೂ ಸೇರಿ ಕುಳಿತು ಅಲ್ಲಿಗೆ ಬಂದ ಹಣ್ಣುಗಳನ್ನು ಸಾರ್ವಜನಿಕರಿಗೆ ಪ್ರಸಾದ ರೂಪದಲ್ಲಿ ಹಂಚಿ ತಿನ್ನುವುದು ಸಂಪ್ರದಾಯ.

ಸಂಜಯ್ ದೇವರ ಅಲಂಕಾರ ನೋಡಿದ. ತನ್ನ ಕಣ್ಣನ್ನು ನಂಬಲೇ ಆಗದಷ್ಟು ಅವನಿಗೆ ಖುಷಿಯಾಯಿತು. ದೇವರ ಮೂರ್ತಿಯ ಪ್ರತೀ ಅಂಗಾಂಗಳಿಗೆ ಸರಿಯಾಗಿ ಆ ತರಹದ ಹಣ್ಣುಗಳನ್ನು ಅಲಂಕಾರ ಮಾಡಿದ್ದಾರೆ. ಅಬ್ಬಬ್ಬಾ, ಎಂಥ ಕಲೆ! ಅಂದುಕೊಂಡ.

ಪ್ರಭಾಕರನನ್ನು ಕರೆದು ಈ ಚಂದವನ್ನು ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿಯಲು ಹೇಳಿದ. ಹಾಗೆಯೇ ಪ್ರಭಾಕರನಲ್ಲಿ ಆ ದಿನದ ಎಲ್ಲಾ ಕಾರ್ಯಕ್ರಮವನ್ನೂ ರೆಕಾರ್ಡ್ ಮಾಡಲು ಹೇಳಿದ. ಪ್ರಭಾಕರನ ಮುಖ ಖುಷಿಯಿಂದ ಬೀಗಿತು. ಆಗ ಭಜನೆ ಶುರು ಆಯಿತು. ದೇವರ ಭಜನೆ, ಡೋಲು, ಕುಣಿತ ಸಂಜಯನಿಗೆ ಹೊಸದು. ಅಮೇರಿಕದಲ್ಲಿ ಇಸ್ಕಾನ್ ಮಂದಿರಗಳಲ್ಲಷ್ಟೇ ನೋಡಿದ್ದ. ಸೀತಾಪುರದ ಭಜನೆ ಇಸ್ಕಾನ್ ಭಜನೆಯನ್ನೂ ಮೀರಿಸುವಂತಿತ್ತು.

ನಂತರ ಪೂಜೆ ಶುರುವಾಯ್ತು. ಅದ್ಭುತವಾದ ಅಲಂಕಾರದ ಎದುರು ಹಲವಾರು ದೀಪಗಳನ್ನೂ ಹಣತೆಗಳನ್ನೂ ಹಚ್ಚಿ ಇಟ್ಟಿದ್ದರು. ದೇವಸ್ಥಾನದ ಎದುರು ಇದ್ದ ಕೊಳದಲ್ಲಿ ಇಡೀ ಹಣತೆಗಳ ದೀಪ ಪ್ರತಿಫಲಿಸುತ್ತಿತ್ತು. ಊದುಬತ್ತಿಗಳಿಂದ ಬರುತ್ತಿದ್ದ ಸುವಾಸನೆ ಇಡೀ ವಾತಾವರಣವನ್ನು ತುಂಬಿತು. ಜನರು ಲಯಬದ್ಧವಾಗಿ ಗಂಟೆಗಳನ್ನು ಬಾರಿಸತೊಡಗಿದರು. ಸಂಜಯ್ ಇದನ್ನೆಲ್ಲಾ ನೋಡುತ್ತಾ ಬೇರೆಯೇ ಲೋಕದ ಅನುಭವ ಪಡೆದ.

ಪೂಜೆ ಮುಗಿದು ಆರತಿ ಬಂತು. ಎಲ್ಲರೂ ಆರತಿ ತೆಗೆದುಕೊಂಡರು. ನಂತರ ಊರ ಹುಡುಗರು ದೇವಸ್ಥಾನದ ಪ್ರಾಂಗಣದಲ್ಲಿ ಉದ್ದಕ್ಕೆ ಒಂದೊಂದೇ ಬಾಳೆ ಎಲೆ ಹಾಕಲು ಪ್ರಾರಂಭ ಮಾಡಿದರು. ನೂರಾರು ಬಾಳೆ ಎಲೆ ಹಾಕಿದಮೇಲೆ ಅಲ್ಲಿದ್ದ ಹಿರಿಯರು ಸಹಪಂಕ್ತಿ ಭೋಜನಕ್ಕೆ 'ಎಲ್ಲರೂ ಕೂತ್ಕೊಳ್ಳಿ' ಅಂದರು.

ಪ್ರಾಂಗಣದಲ್ಲಿ ಟ್ಯೂಬ್‌ಲೈಟುಗಳು ಹೊಳೆಯುತ್ತಿದ್ದವು. ಹೊರಗೆ ಅಂಗಳದಲ್ಲಿ ಪೂರ್ಣ ಚಂದಿರನ ಬೆಳದಿಂಗಳು ಹರಡಿತ್ತು. ಎಲ್ಲರೂ ಎಲೆಯೆದುರು ಕುಳಿತ ಮೇಲೆ ಕೆಲವು ಹುಡುಗರು ಪ್ರತೀ ಎಲೆಗೂ ಹಣ್ಣುಗಳನ್ನು ಹಾಕತೊಡಗಿದರು. ಹಾಗೆಯೇ ಕಡಲೆಯನ್ನು ಬೇಯಿಸಿ ಮಾಡಿದ ತಿಂಡಿಯನ್ನೂ ಹಾಕಿದರು. ಒಮ್ಮೆ ಎಲ್ಲರೂ 'ಗೋವಿಂದಾ' ಅಂದ ಮೇಲೆ ಹಣ್ಣುಗಳನ್ನು ತಿನ್ನಲು ಪ್ರಾರಂಭಿಸಿದರು.

ಈ ರೀತಿ ಎಲ್ಲರೂ ಉದ್ದಕ್ಕೂ ಕುಳಿತು ಉಣ್ಣುವುದು ಎಷ್ಟು ಚೆನ್ನ ಅಂದುಕೊಂಡ ಸಂಜಯ್.

ಸಂಜಯ್ ಗಂಡಸರ ಲೈನ್‌ನಲ್ಲಿ ಇದ್ದರೆ ಆಶಾ ಹೆಂಗಸರ ಲೈನ್‌ನಲ್ಲಿ ಅವನೆದುರು ಕುಳಿತಿದ್ದಳು. ಅಲ್ಲಿಂದಲೇ ಕೈಸನ್ನೆ ಕಣ್ಣು ಸನ್ನೆಯಿಂದ ಅವಳು ಏನನ್ನು ಮೊದಲು ತಿನ್ನಬೇಕು, ಏನನ್ನು ನಂತರ ತಿನ್ನಬೇಕು ಅಂತ ಸಂಜಯನಿಗೆ ಸಂದೇಶ ನೀಡುತ್ತಿದ್ದಳು.

ರಾತ್ರಿಯ ಉಪಾಹಾರದ ನಂತರ ಎಲ್ಲರೂ ಹೊರಡಲು ಪ್ರಾರಂಭಿಸಿದಾಗ ಶೆಟ್ಟರು ದೇವಸ್ಥಾನದ ಕಟ್ಟೆಯ ಮೇಲೇರಿ ಎಲ್ಲರಿಗೂ ಕೇಳುವ ಹಾಗೆ 'ನಮಸ್ಕಾರ. ಸ್ವಲ್ಪ ನಿಲ್ಲಿ' ಎಂದು ದೊಡ್ಡದಾಗಿ ಉದ್ಘೋಷಿಸಿದರು.

ಎಲ್ಲರೂ ಶೆಟ್ಟರ ಕಡೆಗೆ ನೋಡ ತೊಡಗಿದರು. ಶೆಟ್ಟರು 'ಎಲ್ಲರಲ್ಲೂ ಒಂದು ಹದಿನೈದು ನಿಮಿಷ ಇಲ್ಲೇ ಕುಳಿತುಕೊಳ್ಳಲು ವಿನಂತಿ. ನಿಮಗೆ ನಾನು ಹೇಳಬೇಕಾದ ಬಹಳ ಮುಖ್ಯ ಸಂಗತಿ ಇದೆ' ಎಂದರು. ಅದನ್ನು ಕೇಳಿ ಎಲ್ಲರೂ ಅಲ್ಲೇ ದೇವಸ್ಥಾನದ ಅಂಗಳದಲ್ಲಿ ಕುಳಿತುಕೊಂಡರು.

'ನೋಡಿ, ನಮ್ಮ ನಡುವೆ ಒಬ್ಬರು ಬಹಳ ಮುಖ್ಯ ವ್ಯಕ್ತಿ ಇದ್ದಾರೆ' ಎನ್ನುತ್ತಾ ಸಂಜಯನನ್ನು ಕಟ್ಟೆಯ ಮೇಲೆ ಆಹ್ವಾನಿಸಿದರು.

ಆಮೇಲೆ, 'ಇವರು ಸಂಜಯ್ ಕಾರಂತರು. ನಮ್ಮ ಅನಂತ ಕಾರಂತರ ಮಗ, ಕೃಷ್ಣ ಕಾರಂತರ ಮೊಮ್ಮಗ' ಎಂದು ಶೆಟ್ಟರು ಹೇಳಿದಾಗ ಜನರಲ್ಲಿ ಗುಸುಗುಸು ಪ್ರಾರಂಭವಾಯಿತು. ಕೃಷ್ಣ ಕಾರಂತರು ಎಲ್ಲರಿಗೂ ಗೊತ್ತಿದ್ದವರೇ.

ಶೆಟ್ಟರು ಮತ್ತೆ ಮುಂದುವರಿಸಿ, 'ಇವರು ಅಮೇರಿಕದಿಂದ ಬಂದಿದ್ದಾರೆ. ಇವರು ಅಲ್ಲಿ ಬಹಳ ಪ್ರಸಿದ್ಧ ವ್ಯಕ್ತಿ. ಇವರು ಇಲ್ಲಿ ನಮ್ಮೊಂದಿಗೆ ಇನ್ನೆರಡು ತಿಂಗಳು ಇರುತ್ತಾರೆ. ಅವರಿಗೆ ಅವರ ಅಪ್ಪನ ಹಾಗೇ ನಮ್ಮ ಸೀತಾಪುರದ ಅಭಿವೃದ್ಧಿಯ ಹಂಬಲ. ಹಾಗಾಗಿ ಅವರು ನಮಗಾಗಿ ಒಂದು ಹೊಸ ಪ್ಲಾನ್ ತಂದಿದ್ದಾರೆ' ಎಂದವರೇ 'ಕಾರಂತರೇ, ಇದನ್ನು ನೀವೇ ಹೇಳಬೇಕು' ಎನ್ನುತ್ತಾ ಸಂಜಯನ ಕಡೆ ನೋಡಿ ಕೈಮುಗಿದರು.

ಪ್ರಭಾಕರ ಎಲ್ಲವನ್ನೂ ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಿದ್ದ. ಸಂಜಯ್ ಕಟ್ಟೆಯ ಮೇಲೆ ತನ್ನ ಲ್ಯಾಪ್‌ಟಾಪ್ ಓಪನ್ ಮಾಡಿದ. ಎಲ್ಲರಿಗೂ ನಮಸ್ಕಾರ ಹೇಳಿ ತನ್ನ ಈ ಹಿಂದಿನ ಎರಡು ದೇಶಗಳ ಪ್ರಯಾಣಗಳ ಅನುಭವ ಹೇಳಿದ. ಅವನ ಲ್ಯಾಪ್‌ಟಾಪ್‌ನಲ್ಲಿ ಅವನ ದಕ್ಷಿಣ ಅಮೆರಿಕ ಪ್ರವಾಸದ ಹಾಗೂ ಆಫ್ರಿಕಾ ಪ್ರವಾಸದ ಸಣ್ಣ ಡಾಕ್ಯುಮೆಂಟರಿ ಇತ್ತು. ಅದನ್ನು ತೋರಿಸುತ್ತಾ ಅದಕ್ಕೆ ಕನ್ನಡದಲ್ಲಿ ಕಾಮೆಂಟರಿ ಹೇಳುತ್ತಾ ಹೇಗೆ ಆ ಎರಡು ಊರುಗಳು ಸಂಪೂರ್ಣ ರೂಪಾಂತರಗೊಂಡವು ಎಂಬುದನ್ನು ವಿವರಿಸಿದ. ಅಲ್ಲಿಯ ಜನ ಹೇಗಿದ್ದರು ಮತ್ತು ಈಗ ಹೇಗಿದ್ದಾರೆ ಎಂಬುದನ್ನು ಮುಂದಿಟ್ಟ.

ಅಷ್ಟರಲ್ಲಿ ಕೂತವರಲ್ಲಿ ಒಬ್ಬರು ಎದ್ದುನಿಂತು, 'ಕಾರಂತರೇ, ಇದು ಒಳ್ಳೆ ಕಥೆ, ಆದರೆ ನಮಗೆ ಇದನ್ನು ಯಾಕೆ ಹೇಳುತ್ತಿದ್ದೀರಿ?' ಕೇಳಿದ.

ಸಂಜಯ್ ಮುಂದುವರಿಸಿ, 'ಎರಡು ಊರುಗಳ ಪರಿವರ್ತನೆಯ ನಂತರ ನಾನು ಸೀತಾಪುರಕ್ಕೆ ಬಂದಿದ್ದೇನೆ. ಆ ಊರುಗಳಲ್ಲಿ ನಾನು ಮಾಡಿದ ಅಭಿವೃದ್ಧಿಗಿಂತಲೂ ದೊಡ್ಡ ಅಭಿವೃದ್ಧಿ ಇಲ್ಲಿ ಸೀತಾಪುರದಲ್ಲಿ ಮಾಡಬೇಕೆಂದು ಆಸೆ ನನಗಿದೆ. ಇದಕ್ಕೆ ನಿಮ್ಮ ಸಹಾಯ ಸಹಕಾರ ಬೇಕು' ಅಂದ.

'ನಾವು ಆಫ್ರಿಕಾದಲ್ಲೂ ಇಲ್ಲ, ಅಮೆರಿಕದಲ್ಲೂ ಇಲ್ಲ, ನಾವು ಭಾರತದಲ್ಲಿದ್ದೇವೆ. ನಾವು ಸೀತಾಪುರದಲ್ಲಿ ದೇವರ ದಯದಿಂದ ಚೆನ್ನಾಗಿದ್ದೇವೆ. ನಮಗೆ ಇದೆಲ್ಲಾ ಯಾಕೆ?' ಒಬ್ಬರು ಹಿರಿಯರು ಕೇಳಿದರು.

'ಈ ಕಾರಂತರು ಅವರ ಅಪ್ಪನ ತರಹ ಒಂದೆರಡು ತಿಂಗಳಿದ್ದು ಮತ್ತೆ ಅಮೆರಿಕಕ್ಕೆ ಹೋಗುತ್ತಾರೆ. ಇಲ್ಲಿ ಮತ್ತೆ ನಮ್ಮ ಗತಿಯೇನು?' ಅಂದ ಇನ್ನೊಬ್ಬ.

'ಅದೆಲ್ಲಾ ಬಿಡಿ, ಮೊದಲಿಗೆ ಏನು ಹೇಳುತ್ತಾರೋ ಕೇಳುವ', ಎನ್ನುತ್ತಾ 'ನಮ್ಮಿಂದೇನಾಗಬೇಕು ಕಾರಂತರೇ?' ಅಂತ ಮತ್ತೊಬ್ಬ ಒಬ್ಬ ಯುವಕ ಕೇಳಿದ.

'ನೋಡಿ, ನಾವು ಅಂದರೆ ನಮ್ಮ ಶೆಟ್ಟರು ಮತ್ತು ಆನಂದಣ್ಣ ಸೇರಿ ಮೂವರು ಬಹಳ ದೊಡ್ಡ ಆಲೋಚನೆ ಮಾಡಿದ್ದೇವೆ. ಮೊದಲಿಗೆ ನಮ್ಮ ಊರಿಗೆ ಇಂಟರ್ನೆಟ್ ತರುತ್ತೇವೆ. ಅದನ್ನು ನೋಡಲು ಮತ್ತು ನೋಡಿ ಆನಂದಿಸಲು ನಿಮ್ಮಲ್ಲಿ ಐವತ್ತು ಜನರಿಗೆ ಉಚಿತವಾಗಿ ಸ್ಮಾರ್ಟ್ ಫೋನ್ ಕೊಡುತ್ತೇನೆ. ನನ್ನ ಪ್ರಕಾರ ಸೆಲ್ ಫೋನ್ ಉಪಯೋಗಿಸಿ ಬಹಳ ದೊಡ್ಡ ಬಿಸಿನೆಸ್ ಇಲ್ಲಿ ಸೀತಾಪುರದಲ್ಲೇ ಕುಳಿತು ನೀವು ಮಾಡಬಹುದು. ಅದು ಹೇಗೆ ಮಾಡುವುದು ಅಂತ ಮುಂದೆ ಹೇಳುತ್ತೇನೆ. ಆದರೆ ಇದಕ್ಕೆ ಮೊದಲು ಈ ಊರಿಗೆ ಅನುಕೂಲ ಆಗ್ಲಿಕ್ಕೆ ಒಂದು ಒಳ್ಳೆಯ ಮತ್ತು ಚೆನ್ನಾಗಿರುವ ಕಾಲುದಾರಿ ಮಾಡಬೇಕು. ಜೊತೆಗೆ ಎರಡು ಕುಟೀರ ಮಾಡುವ ಆಲೋಚನೆಯೂ ಇದೆ' ಎಂದ.

ಜನ ದಂಗಾದರು. ಎಲ್ಲರೂ ಅವರವರ ಮುಖ ನೋಡಲು ಪ್ರಾರಂಭಿಸಿದರು. ಸೇರಿದ ಜನ ಇದನ್ನೆಲ್ಲವನ್ನೂ ಅರಗಿಸಿಕೊಳ್ಳುವ ಮೊದಲೇ ಆನಂದಣ್ಣ 'ಯಾರಿಗೆ ಸೆಲ್ ಫೋನ್ ಬೇಕು? ಯಾರು ಇಂಟರ್ನೆಟ್‌ನಲ್ಲಿ ಬಿಸಿನೆಸ್ ಮಾಡಿ ಹಣ ಮಾಡಲು ಮನಸ್ಸಿದ್ದೀರಿ?' ಕೇಳಿದರು.